KARC200021722023

Presented on : 14-09-2023
Registered on : 14-09-2023
Decided on : 04-08-2026
Duration: 02 yrs, 10 months, 20 days

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೇವದುರ್ಗ ನ್ಯಾಯಾಲಯ, ದೇವದುರ್ಗ.

ಉಪಸ್ಥಿತರು : ಶ್ರೀ.ಸುರೇಶ ಅಣ್ಣಪ್ಪ ಸವದಿ.

ಬಿ.ಎ,ಎಲ್.ಎಲ್.ಬಿ.,(ಸ್ಪೇಷಲ್).

ಇಂದು ದಿನಾಂಕ 4 ನೇ ಆಗಸ್ಟ 2026

ಸಿ. ಸಿ. ನಂ.651 : 2023

(ಗುನ್ನೆ ನಂ.56/2022-23- ಮಾನವಿ ಅಬಕಾರಿ ವಲಯ ಕಛೇರಿ)

| | |
|---|---|
| **ಪಿರ್ಯಾದುದಾರರು** : | ಕರ್ನಾಟಕ ಸರಕಾರ, ಮಾನವಿ ಅಬಕಾರಿ ವಲಯ ಕಛೇರಿ, ಮಾನವಿ. |
| | (ಸಹಾಯಕ ಸರಕಾರಿ ಅಭಿಯೋಜಕರು) |
| **ಆರೋಪಿತರು:** | 1. ಬೀಬಿ ಗಂಡ ಶರಣಪ್ಪ, ವಯಸ್ಸುಃ 26 ವರ್ಷ, ಉಃ ಕೂಲಿ, ಸಾಃ ಚೀನನಾಯಕ ತಾಂಡಾ, ತಾಃ ದೇವದುರ್ಗ. |
| | (ಶ್ರೀ.ಎಸ್.ಪಿ.ವಕೀಲರು) |

| | |
|---|---|
| ಗುನ್ನೆ ನಡೆದ ದಿನಾಂಕ | 10.04.2023 |
| ಗುನ್ನೆಯನ್ನು ವರದಿ ಮಾಡಿದ ದಿನಾಂಕ | 10.04.2023 |
| ಅಂತಿಮ ವರದಿ ಸಲ್ಲಿಸಿದ ದಿನಾಂಕ | 13.09.2023 |

| | |
|---|---|
| ದೋಷಾರೋಪಣೆ ಮಾಡಿದ ದಿನಾಂಕ | 18.06.2024 |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 12.09.2024 |
| ತೀರ್ಪನ್ನು ಕಾಯ್ದಿರಿಸಿದ ದಿನಾಂಕ | 01.08.2026 |
| ತೀರ್ಪಿನ ದಿನಾಂಕ | 04.08.2026 |
| ಶಿಕ್ಷೆಯ ಆದೇಶದ ದಿನಾಂಕ, ಯಾವುದಾದರೂ ಇದ್ದರೆ | – |

## ತೀರ್ಪು

ಪ್ರಸ್ತುತ ಮೊಕದ್ದಮೆಯನ್ನು ಅಬಕಾರಿ ಉಪನಿರೀಕ್ಷಕರು, ಮಾನವಿ ಅಬಕಾರಿ ವಲಯ ಕಛೇರಿ, ಮಾನವಿ ಇವರು ಆರೋಪಿತಳ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32(1) ಮತ್ತು 38(ಎ) ರನ್ವಯ ಶಿಕ್ಷಾರ್ಹ ಅಪರಾಧಗಳಿಗಾಗಿ ಸಲ್ಲಿಸಿದಂತಹ ದೋಷಾರೋಪಣಾ ಪತ್ರದ ಆಧಾರದ ಮೇರೆಗೆ ನೊಂದಾಯಿಸಿಕೊಳ್ಳಲಾಗಿದೆ.

2. **ಅಭಿಯೋಗ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಾಣಿಸಿದಂತಿದೆಃ**

ಮಾನವಿ ಅಬಕಾರಿ ವಲಯ ಕಛೇರಿ ಸರಹದ್ದು, ದೇವದುರ್ಗ ತಾಲೂಕು, ದಿನಾಂಕ 10.04.2023 ರಂದು ಸಾಯಂಕಾಲ 06.00 ಗಂಟೆ ಸಮಯದಲ್ಲಿ ಚೇನನಾಯಕ ತಾಂಡಾದಲ್ಲಿ ಆರೋಪಿತಳು ತನ್ನ ವಾಸದ ಮನೆಯಲ್ಲಿ 05 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನಿನಲ್ಲಿ 05 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸಂಗ್ರಹ ಮಾಡಿರುತ್ತಾಳೆ ಎಂದು ಪ್ರಕರಣ ದಾಖಲಾಗಿರುತ್ತದೆ. ಆದಕಾರಣ ಆರೋಪಿತಳ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32(1) ಮತ್ತು 38(ಎ) ರಡಿಯಲ್ಲಿ ಅಪರಾಧವೆಸಗಿರುತ್ತಾರೆ.

3. ಘಟನೆಯ ಕುರಿತು ಅಮಾನತ್ತು ಪಡಿಸಿಕೊಂಡಿರುವ ಕಳ್ಳಭಟ್ಟಿ ಸಾರಾಯಿ, ಪಂಚನಾಮೆ ಮತ್ತು ಪಿರ್ಯಾದಿ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು,

ತನಿಖೆಯನ್ನು ಕೈಗೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿತಳ ವಿರುದ್ಧ ಸಾಕಷ್ಟು ಸಾಕ್ಷಿ ಪುರಾವೆಗಳು ದೊರೆತಿದ್ದ ಕಾರಣ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

4. ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಮೇಲ್ಕಾಣಿಸಿದ ಅಪರಾಧಗಳಿಗೆ ಸೌಂಜ್ಞೆಯತೆನ್ನು ತೆಗೆದುಕೊಂಡು ಆರೋಪಿತಳ ಹಾಜರಾತಿಯನ್ನು ಪಡೆದಿದ್ದು ಆರೋಪಿತಳು ತನ್ನ ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಗುಜರಾಯಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತಳಿಗೆ ಅಭಿಯೋಗ ಪರ ದಾಖಲಾತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರನ್ವಯ ಒದಗಿಸಲಾಗಿದೆ. ನಂತರ ಆರೋಪಿತಳಿಗೆ ಮೇಲ್ಕಾಣಿಸಿದ ಕಲಂ ರನ್ವಯ ಮತ್ತು ಭಾರತೀಯ ದಂಡ ಸಂಹಿತೆ ಕಲಂ.273 ರಡಿಯಲ್ಲಿ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು ಆರೋಪಿತಳು ತಾವು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ಉತ್ತರಿಸಿ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

5. ಆರೋಪಿತಳು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಅಪರಾಧಗಳನ್ನು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು ಒಟ್ಟು ನಾಲ್ಕು ಸಾಕ್ಷಿದಾರರನ್ನು ಫ್ರಾಸಾಃ1 ರಿಂದ 4 ಎಂದು ವಿಚಾರಣೆಗೆ ಒಳಪಡಿಸಿಕೊಂಡು ಹಾಗೂ ಒಟ್ಟು ಎರಡು ದಾಖಲೆಗಳನ್ನು ನಿಪಿ-1 ಮತ್ತು ನಿಪಿ-2 ಎಂದು ಹಾಗೂ ಮುದ್ದೆಮಾಲು-1 ಎಂದು ಗುರುತಿಸಿಕೊಂಡಿದೆ. ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ನಂತರ ಆರೋಪಿತಳು ದಂಡ ಪ್ರಕ್ರಿಯಾ ಸಂಹಿತೆಯ ಕಲ.313 ರನ್ವಯ ವಿಚಾರಣೆಗೊಳಪಡಿಸಿದ್ದು, ಆರೋಪಿತಳು ತನ್ನ ವಿಚಾರಣಾ ಸಮಯದಲ್ಲಿ ಅಭಿಯೋಗ ಪರ ಸಾಕ್ಷಿದಾರರು ನುಡಿದಿರುವಂತಹ ಸಾಕ್ಷ್ಯವನ್ನು ಅಲ್ಲಗಳೆದು, ತಮ್ಮ ಪರ ಯಾವುದೇ ಪ್ರತಿರಕ್ಷೆ ಸಾಕ್ಷ್ಯವಿಲ್ಲವೆಂದು ನುಡಿದಿರುತ್ತಾರೆ ಮತ್ತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

6. ಅಭಿಯೋಗ ಪರ ಮತ್ತು ಆರೋಪಿತಳ ಪರ ವಕೀಲರ ವಾದ-ಪ್ರತಿವಾದವನ್ನು ಆಲಿಸಿ ಕಡತಗಳನ್ನು ಪರಿಶೀಲನೆ ಮಾಡಲಾಯಿತು.

7. ಆರೋಪಿತಳ ಮೇಲಿನ ಆರೋಪಣೆಯನ್ನು ನಿಸ್ಸಂದೇಹವಾಗಿ ರುಜುವಾತುಪಡಿಸುವುದು, ಅಭಿಯೋಗ ಮೊಕದ್ದಮೆ ಆದ್ಯ ಕರ್ತವ್ಯ. ಕಾರಣ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುತ್ತವೆಃ

1) ಅಭಿಯೋಜನೆಯು ಮಾನವಿ ಅಬಕಾರಿ ವಲಯ ಕಛೇರಿ ಸರಹದ್ದು, ದೇವದುರ್ಗ ತಾಲೂಕು, ದಿನಾಂಕ 10.04.2023 ರಂದು ಸಾಯಂಕಾಲ 06.00 ಗಂಟೆ ಸಮಯದಲ್ಲಿ ಚೀನನಾಯಕ ತಾಂಡಾದಲ್ಲಿ ಆರೋಪಿತಳು ತನ್ನ ವಾಸದ ಮನೆಯಲ್ಲಿ 05 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನಿನಲ್ಲಿ 05 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸಂಗ್ರಹ ಮಾಡಿ ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32(1) ಮತ್ತು 38(ಎ) ಹಾಗೂ ಭಾರತೀಯ ದಂಡ ಸಂಹಿತೆ ಕಲಂ.273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂದು ಅಭಿಯೋಗದವರು ಸಂಶಾಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

2) ಯಾವ ಆದೇಶ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ.1 ಃ ನಕರಾತ್ಮಕವಾಗಿ,

ಅಂಶ.2 ಃ ಅಂತಿಮ ಆದೇಶದಂತೆ ಈ ಕೆಳಗಿನ

## ಃ ಕಾರಣಗಳು ಃ

9. **ಅಂಶ.1ಃ–** ಚಾಸಾ–2/ಪ್ರಾಸಾ–1/ ಅಂಬರೇಶ ತಂದೆ ಮೊನಪ್ಪ ಇವರು ತಮ್ಮ ಸಾಕ್ಷಿಯಲ್ಲಿ ಪೋಲಿಸರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ. ನಿಪಿ–1 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂಬುವುದಾಗಿ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

10. ಚಾಸಾ–1/ಪ್ರಾಸಾ–2/ ಶಿವಲಿಂಗಸ್ವಾಮಿ ತಂದೆ ಜಯದೇವಮೂರ್ತಿ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 10–04–2023 ರಂದು ಸಂಜೆ 5–30 ರ ಸಮಯದಲ್ಲಿ ನಾನು, ಸಿಬ್ಬಂದಿ ಹಾಗೂ ಪಂಚರೊಂದಿಗೆ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅರಕೇರಾದಿಂದ ಸಿರವಾರಕ್ಕೆ ಹೋಗುವ ರಸ್ತೆಯಲ್ಲಿ ರಸ್ತೆ ಗಸ್ತು ಮಾಡುತ್ತಿದ್ದಾಗ ಚೆನ್ನನಾಯ್ಕುತಾಂಡದ ನಿವಾಸಿ ಬೇಬಿ ಗಂಡ ಶರಣಪ್ಪ ಎಂಬುವವರು ತನ್ನ ವಾಸದ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಂಗ್ರಹಣೆ ಮಾಡಿದ್ದಾಳೆ ಎಂಬ ಖಚಿತ ಬಾತ್ಮಿ ಬಂದ ಮೇರೆಗೆ ತಕ್ಷಣ ಸದರಿ ತಾಂಡಕ್ಕೆ ಹೋಗಿ ಮನೆಯ ಹತ್ತಿರ ಹೋಗುತ್ತಿದ್ದಂತೆ ಸಮವಸ್ತ್ರದಲ್ಲಿದ್ದ ನಮ್ಮನ್ನು ಮತ್ತು ವಾಹನವನ್ನು ನೋಡಿ ಒಬ್ಬ ಮಹಿಳೆ ಮನೆಯಿಂದ ಓಡಿ ಹೋಗಿದ್ದು ಹಿಡಿಯಲು ಪ್ರಯತ್ನಿಸಿದ್ಯಾಗ್ಯೂ ಸಿಕ್ಕಿರುವುದಿಲ್ಲ. ಸ್ಥಳದಲ್ಲಿ ಶೋಧನಾ ಸಮೂಚಿತ ವಾರೆಂಟ್‌ನ್ನು ತಯಾರಿಸಿ ಪಂಚರ ಸಮಕ್ಷಮ ಸಿಬ್ಬಂದಿಯೊಂದಿಗೆ ಮನೆಯನ್ನು ಪರಿಶೀಲನೆ ಮಾಡಲಾಗಿ ಮನೆಯ ಒಂದು ಮೂಲೆಯಲ್ಲಿ 05 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನಿನಲ್ಲಿ 05 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿ ಪತ್ತೆಯಾಗಿದ್ದು ಅದನ್ನು ಪಂಚನಾಮೆ ಮಾಡಿ ಅಮಾನತುಪಡಿಸಿಕೊಂಡಿದ್ದು ಅದರಲ್ಲಿ 800 ಎಂ.ಎಲ್ ನಷ್ಟು ರಾಸಾಯನಿಕ ಪ್ರಯೋಗಾಲಯಕ್ಕಾಗಿ ಮಾದರಿಗಾಗಿ ತೆಗೆದು ಪಂಚರ ಮತ್ತು

ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ಅಮಾನತುಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿ, ಪಂಚನಾಮೆಯೊಂದಿಗೆ ಕಚೇರಿಗೆ ಬಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಪಂಚನಾಮೆ, ದೂರು, ಶೋಧನಾ ವಾರೆಂಟ್ ಮತ್ತು ಮುದ್ದೆಮಾಲನ್ನು ಗುರುತಿಸಿಕೊಂಡು ಸಾಕ್ಷಿ ನುಡಿದಿರುತ್ತಾರೆ.

11. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ ಪಂಚರನ್ನು ಅರಕೇರಾದಿಂದ ಕರೆದುಕೊಂಡು ಬರಲಾಗಿರುತ್ತದೆ. ನನ್ನ ದೂರಿನಲ್ಲಿ ಪಂಚರನ್ನು ಸಿಬ್ಬಂದಿಯವರನ್ನು ಅರಕೇರಾ ಗ್ರಾಮದಿಂದ ಕರೆದುಕೊಂಡು ಬಂದಿರುತ್ತಾರೆ ಎಂದು ನಮೂದಿಸಿಲ್ಲ. ಅರಕೇರಾದಿಂದ ಸಿರವಾರ ಅಂತರ ಅಂದಾಜು 53 ಕಿ.ಮೀ ಇದ್ದು ಸದರಿ ರಸ್ತೆ ಗಸ್ತು ಮಾಡುತ್ತಿದ್ದಾಗ ನಿಖರವಾಗಿ ಯಾವ ಸ್ಥಳದಲ್ಲಿದ್ದಾಗ ಬಾತ್ಮಿ ಬಂದಿರುತ್ತದೆ ಎಂದು ನನಗೆ ಈಗ ಹೇಳಲು ನೆನಪಿರುವುದಿಲ್ಲ. ಸದರಿ ದಾಳಿಯ ಸಂದರ್ಭದಲ್ಲಿ ನಮ್ಮೊಂದಿಗೆ ಮಹಿಳಾ ಉಪನಿರೀಕ್ಷಕರು ವೀರಮ್ಮ ನಮ್ಮೊಂದಿಗೆ ಇದ್ದರು. ನಾವು ಸ್ಥಳಕ್ಕೆ ಹೋದಾಗ ಸೇರಿದ ಜನರ ಹೇಳಿಕೆ ಪಡೆದಿರುವುದಿಲ್ಲ ಎಂಬುವುದಾಗಿ ನುಡಿದಿರುತ್ತಾರೆ.

12. ಚಾಸಾ-3/ಪ್ರಾಸಾ-3/ ರಮೇಶ ತಂದೆ ವೆಂಕಟೇಶ ಇವರು ತಮ್ಮ ಸಾಕ್ಷಿಯಲ್ಲಿ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಅಕ್ರಮ ಕಳ್ಳಭಟ್ಟಿ ಸಾರಾಯಿಯನ್ನು ಅಮಾನತ್ತು ಪಡಿಸಿಕೊಂಡಿರುದಿಲ್ಲ. ನಿಪಿ-1 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂಬುವುದಾಗಿ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

13. ಚಾಸಾ-4/ಪ್ರಾಸಾ-4/ ಆಂಜನೇಯ್ಯ ತಂದೆ ಕೃಷ್ಣಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 10-04-2023 ರಂದು ಸಾಯಂಕಾಲ 5-30 ರ ಸುಮಾರಿಗೆ ವಿಧಾನ ಸಭಾ

ಸಾರ್ವತ್ರಿಕ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅಬಕಾರಿ ಉಪ ನಿರೀಕ್ಷಕರು ಮತ್ತು ನಾವು ಹಾಗೂ ಪಂಚರೊಂದಿಗೆ ಅರಕೇರಾದಿಂದ ಸಿರವಾರಕ್ಕೆ ಹೋಗುವ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದಾಗ ಚಿನ್ನನಾಯ್ಕತಾಂಡದ ನಿವಾಸಿಯಾದ ಬೇಬಿ ಗಂಡ ಶರಣಪ್ಪ ಇವರು ತನ್ನ ವಾಸದ ಮನೆಯಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಂಗ್ರಹಣೆ ಮಾಡಿರುತ್ತಾರೆ ಎಂಬ ಖಚಿತ ಬಾತ್ಮಿ ಮೇರೆಗೆ, ತಕ್ಷಣ ಸದರಿಯವಳ ಮನೆಯ ಹತ್ತಿರ ಹೋಗುತ್ತಿದ್ದಂತೆ ಸಮವಸ್ತ್ರದಲ್ಲಿದ್ದ ನಮ್ಮನ್ನು ಮತ್ತು ಅಧಿಕಾರಿಗಳನ್ನು ನೋಡಿ ಸದರಿ ಮನೆಯಿಂದ ಒರ್ವ ಹೆಣ್ಣು ಮಗಳು ಓಡಿ ಹೋಗಿದ್ದು ಹಿಡಿಯಲು ಪ್ರಯತ್ನಿಸಿದರೂ ದೊರೆತಿರುವುದಿಲ್ಲ. ನಂತರ ಮನೆ ಖುಲ್ಲಾ ಇರುವುದರಿಂದ ಅನುಮಾನಗೊಂಡು ಶೋಧನೆಗಾಗಿ ಶೋಧನಾ ಸಮೂಚಿತ ವಾರೆಂಟ್‌ನ್ನು ತಯಾರಿಸಿ ಪಂಚರ ಸಮಕ್ಷಮ ಮನೆಯನ್ನು ಶೋಧನೆ ಮಾಡಲಾಗಿ ಒಂದು ಮೂಲೆಯಲ್ಲಿ 05 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನಿನಲ್ಲಿ 05 ಲೀಟರ್ ಕಳ್ಳಭಟ್ಟಿ ಸಾರಾಯಿ ಪತ್ತೆಯಾಗಿದ್ದು ಅದರಲ್ಲಿ 800 ಎಂ.ಎಲ್ ಕಳ್ಳಭಟ್ಟಿ ಸಾರಾಯಿಯನ್ನು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆಯಲಾಗಿರುತ್ತದೆ. ನಂತರ ಮುದ್ದೆಮಾಲಿನೊಂದಿಗೆ ಠಾಣೆಗೆ ಹಾಜರಾಗಿ ಪ್ರಕರಣ ದಾಖಲಿಸಿರುತ್ತಾರೆ. ನಾನು ಈ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಆರೋಪಿ ಪರ ವಕೀಲರು ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಲಪಡಿಸಿಕೊಳ್ಳುವಲ್ಲಿ ವಿಫಲವಾಗಿರುತ್ತಾರೆ.

14. ಕಡತದಲ್ಲಿನ ಮೌಖಿಕ ಹಾಗೂ ಲಿಖಿತ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಅಭಿಯೋಜನೆಯ ಪ್ರಕಾರ ಆರೋಪಿತಳು ಅಬಕಾರಿ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಉಲ್ಲಂಘನೆ ಮಾಡಿ ಮಾನವ ಜೀವಕ್ಕೆ ಅಪಾಯಕಾರಿಯಾದ ಕಳ್ಳಭಟ್ಟಿ ಸಾರಾಯಿಯನ್ನು ತಯಾರಿಸಿ ಮಾರಾಟ ಮಾಡುವ ಉದ್ದೇಶದಿಂದ ಮನೆಯಲ್ಲಿ ಸಂಗ್ರಹಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ಸಿಬ್ಬಂದಿಯೊಂದಿಗೆ ದಾಳಿ ಮಾಡಿ ಸದರಿ ಆರೋಪಿತಳಿಂದ ಕಳ್ಳಭಟ್ಟಿ ಸಾರಾಯಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಕಳ್ಳಭಟ್ಟಿ ಸಾರಾಯಿಯನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುವುದಾಗಿ ಪ್ರಕರಣ

ದಾಖಲಾಗಿದ್ದು ಅದಕ್ಕೆ ಸಂಬಂಧಿಸಿದಂತೆ ಅಭಿಯೋಜನೆ ಫ್ರಾಸಾ–1 ರಿಂದ 4 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಪ್ರಕರಣದ ಜಪ್ತಿ ಪಂಚನಾಮೆಯ ಪಂಚರಾಗಿ ಫ್ರಾಸಾ–1 ಮತ್ತು 3 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು ಸದರಿಯವರು ತಮ್ಮ ಸಾಕ್ಷಿಯಲ್ಲಿ ಈ ಪ್ರಕರಣದ ಬಗ್ಗೆ ನಮಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಕಳ್ಳಭಟ್ಟಿ ಸಾರಾಯಿಯನ್ನು ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ನಿಪಿ–1 ರಲ್ಲಿ ಬರೆದ ಸಂಗತಿಗಳು ಗೊತ್ತಿಲ್ಲ ಎಂದು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಕರಣದಲ್ಲಿನ ತನಿಖಾಧಿಕಾರಿಯನ್ನು ಅಭಿಯೋಜನೆಯು ವಿಚಾರಣೆಗೆ ಒಳಪಡಿಸಿಕೊಳ್ಳುವಲ್ಲಿ ವಿಫಲವಾಗಿರುತ್ತದೆ. ಆರೋಪಿತಳ ಮನೆಯಿಂದ ಕಳ್ಳಭಟ್ಟಿ ಸಾರಾಯಿಯನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂದು ರುಜುವಾತು ಪಡಿಸಿಕೊಳ್ಳುವಲ್ಲಿ ವಿಫಲವಾಗಿರುತ್ತದೆ. ಒಟ್ಟಾರೆಯಾಗಿ ಎಲ್ಲಾ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶಿಸಿಲಿಸಿದಾಗ ಆರೋಪಿತಳ ಮೇಲೆ ಮಾಡಲಾದ ಆರೋಪಣೆಯನ್ನು ಸಂಶಾಯಾತೀತವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯು ವಿಫಲರಾಗಿರುತ್ತದೆ ಮತ್ತು ಆರೋಪಿತಳು ಸದರಿ ಸಂಶಯದ ಲಾಭಕ್ಕೆ ಅರ್ಹನಿರುತ್ತಾರೆ. ಹಾಗಾಗಿ, ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

15. **ಅಂಶ.2–** ಅಂಶ 1ಕ್ಕೆ ಸಂಬಂಧಿಸಿದಂತೆ ಮಾಡಿರುವ ಚರ್ಚೆಯ ಹಿನ್ನೆಲೆಯಲ್ಲಿ ಆರೋಪಿತಳು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಶಿಕ್ಷಾರ್ಹ ಅಪರಾಧಗಳ ಆರೋಪಣೆಯಿಂದ ಮುಕ್ತರಾಗಲು ಅರ್ಹರಾಗಿದ್ದಾರೆಂದು ಅಭಿಪ್ರಾಯಪಟ್ಟು ಈ ಕೆಳಕಾಣಿಸಿದಂತೆ ಆದೇಶ ಮಾಡಲಾಗಿದೆಃ

## ::: ಆದೇಶ :::

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32(1) ಮತ್ತು 38(ಎ) ಹಾಗೂ ಭಾರತೀಯ ದಂಡ ಸಂಹಿತೆ

ಕಲಂ.273 ರಡಿಯಲ್ಲಿನ ದೋಷಾರೋಪಣೆಯಿಂದ ಮುಕ್ತಗೊಳಿಸಿ ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಆರೋಪಿತಳು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮತ್ತು ಭದ್ರತಾ ಮುಚ್ಚಳಿಕೆಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

ಮುದ್ದೆಮಾಲು-1 ಖಾಲಿ ಬಾಟಲಿಗಳು ಬೆಲೆ ಬಾಳದ ವಸ್ತುವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶ ಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತ ಲೇಖನ ನೀಡಿ ಬೆರಳಚ್ಚು ಪಡಿಸಿದ ನಂತರ ಅದನ್ನು ಪರಿಶೀಲಿಸಿ ತಿದ್ದುಪಡೆಗಳನ್ನು ಮಾಡಿದ ನಂತರ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 4 ನೇ ಆಗಸ್ಟ 2026 ರಂದು ಘೋಷಿಸಲಾಯಿತು).

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.

# ಅನುಬಂಧ

**ಸಾಕ್ಷಾಧಾರಗಳ ಪಟ್ಟಿ**

**ಅಭಿಯೋಜನೆಯ ಪರ ಸಾಕ್ಷಿಗಳು**

| ಶ್ರೇಣಿ | ಹೆಸರುಗಳು | ಸಾಕ್ಷ್ಯದ ಸ್ವರೂಪ |
|---|---|---|
| ಫ್ರಾಸಾ-1 | ಅಂಬರೇಶ ತಂದೆ ಮೋನಪ್ಪ | ಪಂಚಸಾಕ್ಷಿದಾರರು |
| ಫ್ರಾಸಾ-2 | ಶಿವಲಿಂಗಸ್ವಾಮಿ ತಂದೆ ಜಯದೇವಮೂರ್ತಿ | ದೂರುದಾರರು |

| | | |
|---|---|---|
| ಪ್ರಾಸಾ-3 | ರಮೇಶ ತಂದೆ ವೆಂಕಟೇಶ | ಪಂಚಸಾಕ್ಷಿದಾರರು |
| ಪ್ರಾಸಾ-4 | ಆಂಜನೇಯ್ಯ ತಂದೆ ಕೃಷ್ಣಪ್ಪ | ದಾಳಿಗೆ ಸಹಕರಿಸಿದವರು |

**ಆರೋಪಿಗಳ ಪರ ಸಾಕ್ಷಿಗಳು**

| **ಶ್ರೇಣಿ** | **ಹೆಸರುಗಳು** | **ಸಾಕ್ಷ್ಯದ ಸ್ವರೂಪ** |
|---|---|---|
| ಇಲ್ಲ | | |

**ದಾಖಲಾತಿಗಳು**

**ಅಭಿಯೋಜನೆಯ ಪರ ದಾಖಲಾತಿಗಳು**

| **ಸಂಖ್ಯೆ** | **ದಾಖಲಾತಿ ಸಂಖ್ಯೆ** | **ವಿವರಣೆ** |
|---|---|---|
| 1. | ನಿಪಿ-1 | ಪಂಚನಾಮೆ |
| 2. | ನಿಪಿ-2 | ದೂರು |

**ಆರೋಪಿತರ ಪರ ದಾಖಲಾತಿಗಳು**

| **ಸಂಖ್ಯೆ** | **ದಾಖಲಾತಿ ಸಂಖ್ಯೆ** | **ವಿವರಣೆ** |
|---|---|---|
| ಇಲ್ಲ | | |

**ಮುದ್ದೆಮಾಲುಗಳ ಪಟ್ಟಿ**

| **ಸಂಖ್ಯೆ** | **ಮುದ್ದೆಮಾಲಿನ ಸಂಖ್ಯೆ** | **ವಿವರಣೆ** |
|---|---|---|
| 1. | ಮುದ್ದೆ ಮಾಲು-1 | ಖಾಲಿ ಬಾಟಲಿ |

Digitally signed by SURESH ANNAPPA SAVADI
Location: Senior Civil Judge and JMFC, Devadurga

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.